

ಎಐ ಕ್ರಮಾವಳಿಗಳು ಯಾವಾಗ ಹೇಗೆ ವರ್ತಿಸುತ್ತವೆ ಎಂಬುದು ಅದರ ನಿರ್ಮಾತೃಗಳಿಗೇ ತಿಳಿಯುವುದಿಲ್ಲ. ಜನ ನೀಡುವ ದತ್ತಾಂಶಗಳನ್ನು ಅಭ್ಯಸಿಸಿ, ತನ್ನದೇ ಮಾದರಿ ಉತ್ತರ–ವರ್ತನೆ ಸಂಪಾದಿಸುವ ಎಐ ಬಾಟ್‌ಗಳು ಹೇಗೆ ಕ್ರಮಾವಳಿಗಳ ಮೂಲಕ ದತ್ತಾಂಶವನ್ನು ಮಾಹಿತಿಯನ್ನಾಗಿ ಸಂಸ್ಕರಿಸಿಕೊಳ್ಳುತ್ತವೆ ಎಂಬುದೇ ರಹಸ್ಯಮಯ ವಿಷಯ ಎನ್ನುವ ತಜ್ಞರು, ಎಐ ತಂತ್ರಜ್ಞಾನ ಉತ್ಪನ್ನಗಳನ್ನು ಅನುಮಾನದಿಂದ ನೋಡದೆ ಬೇರೆ ದಾರಿ ಇಲ್ಲ ಎನ್ನುತ್ತಾರೆ.

## ಔಷಧಿಯಲ್ಲ, ವಿಷ!

ಎಐ ಆಧರಿತ ಲೈಂಗಿಕ ಬೊಂಬೆಗಳನ್ನು ಚಿಕಿತ್ಸೆಗಾಗಿ ಬಳಸಿಕೊಳ್ಳಲಾಗುತ್ತದೆ ಎನ್ನುವುದನ್ನು ನಂಬಬಹುದು. ಆದರೆ, ವಾಸ್ತವದಲ್ಲಿ ಆರೋಗ್ಯವಂತರೂ ಅದರ ದಾಸರಾಗುತ್ತಿರುವುದು ಸರಿಯಲ್ಲ. ಇದಕ್ಕೆ ಕಾರಣ ಎಐ ಬಾಟ್ ತಯಾರಿಕಾ ಕಂಪನಿಗಳ ಧನದಾಹ ಎಂಬ ಆರೋಪ ದಟ್ಟವಾಗಿ ಕೇಳಿಬರುತ್ತಿದೆ. ಇದನ್ನು ಸಾರಾಸಗಟಾಗಿ ನಿರಾಕರಿಸುವ 'ರಿಯಲ್‌ಬಾಟಿಕ್ಸ್' ಕಂಪನಿಯ ಮುಖ್ಯಸ್ಥ ಮ್ಯಾಟ್‌ಮ್ಯಾಕ್ಲಿನ್, 'ನಮ್ಮ ಉತ್ಪನ್ನಗಳನ್ನೂ ಜನ ಸೆಕ್ಸ್ ಆಟಿಕೆಗಳಂತೆ ನೋಡುತ್ತಿದ್ದಾರೆ, ಅದು ಸರಿಯಲ್ಲ. ನಮ್ಮ ಉತ್ಪನ್ನಗಳು ಕಾಮವನ್ನು ಪ್ರಚೋದಿಸುವುದಕ್ಕಿಂತ ಸಾಂಗತ್ಯವನ್ನು ಪ್ರೊಮೋಟ್ ಮಾಡುತ್ತವೆ, ನೊಂದವರನ್ನು ಸಂತೈಸುತ್ತವೆ' ಎನ್ನುತ್ತಾರೆ. 'ಜನ ಯಂತ್ರಗಳೊಂದಿಗೆ ಲೈಂಗಿಕ ಸಂಭಾಷಣೆ ನಡೆಸುತ್ತಿರುವುದು ಇದೇ ಮೊದಲೇನಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹೇರಳವಾಗಿ ಸಿಗುವ ಸ್ಪ್ಯಾಮ್‌ಬಾಟ್‌ಗಳು (ಕಿತಾಪತಿ ರೋಬಾಟುಗಳು), ಡೇಟಿಂಗ್ ಪ್ರೋತ್ಸಾಹಕ ತಾಣಗಳು, ರೋಬಾಟು ವೇಶ್ಯಾವಾಟಿಕೆ ತಾಣಗಳೆಲ್ಲ ನಮಗಿಂತ ಸ್ವೇಚ್ಛೆಯಿಂದ ತಮ್ಮ ವಿಷಯಗಳನ್ನು ಮಾರಾಟ ಮಾಡುತ್ತವೆ. ಇದಕ್ಕೆಲ್ಲ ಏನು ಹೇಳುತ್ತೀರಿ?' ಎಂದು ಮರು ಪ್ರಶ್ನೆ ಮಾಡುತ್ತಾರೆ.

## ಎಐ ತಡೆಯೋರು ಯಾರೂ ಇಲ್ಲ!

ತಂತ್ರಜ್ಞಾನ ಬೆಳೆದಂತೆಲ್ಲ ಇನ್ನೊಂದು ದಶಕದಲ್ಲಿ ರಿಯಲ್‌ಬಾಟಿಕ್ಸ್‌ನಂತಹ ಎಐ ಗೆಳತಿಯರನ್ನು ಸರಬರಾಜು ಮಾಡುವ ಕಂಪನಿಗಳು ಎಲ್ಲೆಲ್ಲೂ ಇರಲಿವೆ ಮತ್ತು ಜನರಿಂದ ಪ್ರಶಂಸೆಗೊಳಗಾಗಲಿವೆ ಎನ್ನುವ ಅಂದಾಜಿದೆ. ಎಐ ಆಧರಿತ ಬಾಟ್‌ಗಳು ಬಳಕೆದಾರರಿಗೆ ಖಾಸಗಿಯಾಗಿ ಸೇವೆ ನೀಡುವುದರಿಂದ, ಅವರ ಮನೋಕಾಮನೆಗಳನ್ನು ಕೇವಲ ಮಾತು–ವರ್ತನೆಗಳಿಂದ ಪೂರೈಸುವುದರಿಂದ ಸಮಾಜಕ್ಕೆ ಅಂಥ ತೊಂದರೆಯೇನೂ ಆಗಲಾರದು ಎನ್ನುವ ತಜ್ಞರು, ಅವುಗಳ ನಿಯಂತ್ರಣಕ್ಕೆ ಗಮನಕೊಡಬೇಕು ಎನ್ನುತ್ತಾರೆ. 'ನಿಜವಾದ ಕಾಮಕೂಟವನ್ನು ಕೇವಲ ಮಾತಿನಿಂದ, ಹಾವಭಾವಗಳಿಂದ ಪೂರೈಸುವುದಾದರೆ, ಅದೊಂದು ರೀತಿಯ ಸೇಫ್ ಸೆಕ್ಸ್ (ಸುರಕ್ಷಿತ ಲೈಂಗಿಕತೆ) ಅಲ್ಲವೆ?' ಎಂದು ಕೇಳುವ ತಜ್ಞವೈದ್ಯ ಯಾದವ್, 'ಅಪಘಾತ, ಸಂಗಾತಿಯ ಸಾವು, ಮಾನಸಿಕ ದೌರ್ಬಲ್ಯ, ಅಂಗವೈಕಲ್ಯ, ಲೈಂಗಿಕ ಅಸಮರ್ಥತೆಯಿಂದ ಬಳಲುವವರಿಗೆ ಇದರಿಂದ ಸಮಸ್ಯೆ ಬಗೆಹರಿದರೆ ಸಾಕು' ಎನ್ನುತ್ತಾರೆ.

ಲೈಂಗಿಕ ವಿಷಯಗಳನ್ನೇ ಗೀಳಾಗಿಸಿಕೊಳ್ಳುವುದಕ್ಕಿಂತ ಜನರು ಯಾಂತ್ರಿಕ ಬುದ್ಧಿಮತ್ತೆಯ ಕೈಗೊಂಬೆಯಾಗುವುದು ತೀರಾ ಅಪಾಯಕರ ಎನ್ನುವ ಅಭಿಪ್ರಾಯವಿರುವ ಮನೋವೈದರು, ಚಿಕಿತ್ಸಕರು ವೈಯಕ್ತಿಕ ನೆಲೆಯಲ್ಲಿದ್ದರೆ ಎಐ ಗೆಳತಿಯರಿಂದ ಹೆಚ್ಚಿನ ಅಪಾಯ ಇರುವುದಿಲ್ಲವಾದರೂ ಜಾಗರೂಕತೆ ಇರಲೇಬೇಕು ಎಂದು ಒತ್ತಾಯಿಸುತ್ತಾರೆ. ನ್ಯೂನತೆಯಿರದ ಸೇವೆ ನೀಡುವ ಎಐ ಗೆಳತಿಯರಿಗೆ ದಾಸರಾಗುವ ಗಂಡಂದಿರು ತಮ್ಮ ಪತ್ನಿಯರಿಗೆ ಡೈವೋರ್ಸ್ ನೀಡಲು ಶುರು ಮಾಡಬಹುದು ಎಂದು ಅಂಜುವವರೂ ಇದ್ದಾರೆ. ನೈಜ ಮನುಷ್ಯ ಸಂಬಂಧಗಳು ಸಮಾಜವನ್ನು ಬೆಸೆಯುತ್ತವೆ ಮತ್ತು ಮಾನವೀಯತೆಯನ್ನು ಉಳಿಸಿ ಬೆಳೆಸುತ್ತವೆ. ಯಂತ್ರಗಳಿಗೆ ಆ ಬುದ್ಧಿ ಇದೆಯೆ? ಅದನ್ನು ಯಾರಾದರೂ ಗ್ಯಾರಂಟಿ ನೀಡುತ್ತಾರಾ ಎಂದು ಪ್ರಶ್ನಿಸುತ್ತಾರೆ.

ಚರ್ಚೆ, ಪರ–ವಿರೋಧಗಳೇನೇ ಇರಲಿ, ಎಐ ಗೆಳತಿಯರ ಆಗಮನ ಶುರುವಾಗಿದೆ. ಅನುಕೂಲಗಳಿರುವಂತೆ ಸವಾಲುಗಳೂ ಇವೆ. ಸಾಂಗತ್ಯ ಮತ್ತು ಸಾಂತ್ವನ ಎರಡನ್ನೂ ನೀಡಬಲ್ಲ ಯಂತ್ರಬುದ್ಧಿಯಿಂದ ನಮ್ಮ ವೈಯಕ್ತಿಕ ಗೋಪ್ಯತೆ, ಸಾಮಾಜಿಕ ಭದ್ರತೆಗಳು ಅಪಾಯದಲ್ಲಿ ಸಿಲುಕಲಿವೆ. ಯಾವುದೇ ತಂತ್ರಜ್ಞಾನ ಎರಡು ಅಲಗಿನ ಕತ್ತಿಯಂತೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬುದು ಗೊತ್ತಿರುವ ವಿಷಯವೇ. ಇಂಥ ಸನ್ನಿವೇಶದಲ್ಲಿ ಎಐ ಗೆಳತಿಯರ ಅವಶ್ಯಕತೆಗಳ ಕುರಿತು, ಅವುಗಳ ನೈತಿಕ ಜವಾಬ್ದಾರಿ ಮತ್ತು ಅಭಿವೃದ್ಧಿಯ ಕಡೆ ತುರ್ತು ಗಮನ ಹರಿಸಬೇಕಿದೆ. ಅವುಗಳ ಬಳಕೆಯಿಂದ ಸಾಮಾಜಿಕ ಲಾಭಗಳಾಗಬೇಕೇ ಹೊರತು ನಷ್ಟವಲ್ಲ. ಸಾಮಾಜಿಕ ಆರೋಗ್ಯವನ್ನು ಬಲಿಕೊಡದೆ, ಜನರ ಮೂಲಭೂತ ಹಕ್ಕುಗಳಿಗೆ ಸಂಚಕಾರ ತರದೆ, ಎಐ ಗೆಳತಿಯರು ನಮ್ಮೊಡನಿರುವುದಾದರೆ ಬೇಡವೆನ್ನಲು ನಾವ್ಯಾರು?

ಪ್ರತಿಕ್ರಿಯಿಸಿ: feedback@sudha.co.in